ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ

ದೂರವಾಣಿ: 08172-267345, email:deo.hassan@gmail.com

ಸಂ:ಉನಿಸಕಇಹಾ/ಡಿ3/ವ.ಶಾ/ಸಿಆರ್6/22-23 ದಿ:15-6-2023.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.

ಮಾನ್ಯರೆ,

ವಿಷಯ:-ಹಾಸನ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೂರು ವಸತಿ ಶಾಲೆಗಳಿಗೆ ಟೆಂಡರ್ ಆದೇಶದ ಸ್ಪೆಸಿಫಿಕೇಷನ್‌ಗೆ ಅನುಗುಣವಾದ ಹಾಸಿಗೆ, ದಿಂಬು ಸರಬರಾಜು ಮಾಡದ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್, ಬೆಂಗಳೂರು ಸಂಸ್ಥೆಯನ್ನು ಹಾಸನ ಜಿಲ್ಲೆಯ ಟೆಂಡರ್ ಪ್ರಕ್ರಿಯೆಯಿಂದ ಡಿಬಾರ್ ಮಾಡಿರುವ ಬಗ್ಗೆ.

ಉಲ್ಲೇಖ:-1)ಇದೇ ಸಮಸಂಖ್ಯೆ ಟೆಂಡರ್ ಪ್ರಕಟಣೆ ದಿ:20-6-2022.
2)ಇದೇ ಸಮಸಂಖ್ಯೆ ಟೆಂಡರ್ ಆದೇಶ ದಿ:13-9-2022.
3)ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ರವರ ಪತ್ರ ಸಂ/ಕವಶಿಸಸ/ಮೂಭೂ2/ಸಿಆರ್81/21-22(ಹಾಸನ) ದಿ:30-11-2022.
4)ತಮ್ಮ ಪತ್ರ ಸಂ/ಸಕಇ/348/ಎಂಡಿಎಸ್ 2022 ದಿ:16-12-2022.
5)ಇದೇ ಸಮಸಂಖ್ಯೆ ಆದೇಶ ದಿ:26-12-2022.
6)ಅಪರ ಜಿಲ್ಲಾಧಿಕಾರಿಗಳು, ಹಾಸನ ಹಾಗೂ ಅಧ್ಯಕ್ಷರು, ಡಿಬಾರ್‌ಮೆಂಟ್ ಸಮಿತಿ ರವರ ವರದಿ ದಿ:13-6-2023.
7)ಇದೇ ಸಮಸಂಖ್ಯೆ ಆದೇಶ ದಿ:14-6-2023.

**********

ವಿಷಯಕ್ಕೆ ಸಂಬಂಧಿಸಿದಂತೆ, ಹಾಸನ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಎಂ.ಡಿ.ಹೊಸೂರು, ದುದ್ದ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬ್ಯಾಕರವಳ್ಳಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, ಗುಡ್ಡೇನಹಳ್ಳಿ ವಸತಿ ಶಾಲೆಗಳಿಗೆ ದಿ:20-6-2022ರ ಟೆಂಡರ್ ಪ್ರಕಟಣೆಯಲ್ಲಿ ನಿಗದಿಪಡಿಸಿದ ಸ್ಪೆಸಿಫಿಕೇಷನ್‌ಗೆ ಅನುಗುಣವಾದ ಮತ್ತು ತಾಂತ್ರಿಕ ಪರಿಣಿತರಿಂದ ಅನುಮೋದನೆಯಾಗಿದ್ದ ಮಾದರಿಗನುಗುಣವಾದ ಹಾಸಿಗೆ, ದಿಂಬುಗಳನ್ನು ಸರಬರಾಜು ಮಾಡದೇ ಕಳಪೆ ಗುಣಮಟ್ಟದ ಹಾಸಿಗೆ, ದಿಂಬುಗಳನ್ನು ಸರಬರಾಜು ಮಾಡಿದ್ದ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್, ಬೆಂಗಳೂರು ಸಂಸ್ಥೆಯ ವಿರುದ್ಧ ಕ್ರಮ ಜರುಗಿಸಲು ಉಲ್ಲೇಖ (4)ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ. ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್, ಬೆಂಗಳೂರು ರವರ ಸಂಸ್ಥೆಯನ್ನು ಡಿಬಾರ್ ಮಾಡಲು ಉಲ್ಲೇಖ (5)ರ ಆದೇಶದಲ್ಲಿ ಡಿಬಾರ್‌ಮೆಂಟ್ ಸಮಿತಿ ರಚಿಸಿ ಆದೇಶಿಸಲಾಗಿರುತ್ತದೆ. ಡಿಬಾರ್‌ಮೆಂಟ್ ಸಮಿತಿಯ ಅಧ್ಯಕ್ಷರಾದ ಅಪರ ಜಿಲ್ಲಾಧಿಕಾರಿಯವರು ಉಲ್ಲೇಖ (6) ರಲ್ಲಿ ಡಿಬಾರ್‌ಮೆಂಟ್ ಸಮಿತಿ ವರದಿ ಸಲ್ಲಿಸಿರುತ್ತಾರೆ. ಡಿಬಾರ್‌ಮೆಂಟ್ ಸಮಿತಿಯ ವರದಿಯನ್ನು ಅವಲೋಕಿಸಿ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್, ಬೆಂಗಳೂರು ರವರ ಸಂಸ್ಥೆಯನ್ನು ಹಾಸನ ಜಿಲ್ಲೆಯ ಯಾವುದೇ ಇಲಾಖೆಗಳಿಂದ ಕರೆಯುವ ಟೆಂಡರ್ ಪ್ರಕ್ರಿಯೆಗಳಿಂದ ಒಂದು ವರ್ಷದ ಅವಧಿಗೆ ಭಾಗವಹಿಸದಂತೆ ಡಿಬಾರ್ ಮಾಡಿ ಆದೇಶಿಸಲಾಗಿರುತ್ತದೆ. ಆದೇಶದ ಪ್ರತಿಯನ್ನು ಈ ಕೂಡ ಲಗತ್ತಿಸಿ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ,
15/6
ಜಿಲ್ಲಾಧಿಕಾರಿ,
ಹಾಸನ ಜಿಲ್ಲೆ, ಹಾಸನ.



Generated from eOffice by SAVITHA S, SWD-DS2-ASST(SS), ASSISTANT, SOCIAL WELFARE SEC on 22/06/2023 11:44 AM
Generated from eOffice by VEENA H S, KREIS-ADM-CO(VN), COMPUTER OPERATOR, KARNATAKA RESIDENTAL EDUCATIONAL INSTITUTIONS SOCIETY on 26/06/2023 04:10

# ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ರವರ ನಡವಳಿಗಳು

ವಿಷಯ:-ಹಾಸನ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೂರು ವಸತಿ ಶಾಲೆಗಳಿಗೆ ಟೆಂಡರ್ ಆದೇಶದ ಸ್ಪೆಸಿಫಿಕೇಷನ್‌ಗೆ ಅನುಗುಣವಾದ ಹಾಸಿಗೆ, ದಿಂಬು ಸರಬರಾಜು ಮಾಡದ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೊರೇಷನ್, ಬೆಂಗಳೂರು ಸಂಸ್ಥೆಯನ್ನು ಹಾಸನ ಜಿಲ್ಲೆಯ ಟೆಂಡರ್ ಪ್ರಕ್ರಿಯೆಯಿಂದ ಡಿಬಾರ್ ಮಾಡುವ ಬಗ್ಗೆ.

ಉಲ್ಲೇಖ:-1)ಇದೇ ಸಮಸಂಖ್ಯೆ ಟೆಂಡರ್ ಪ್ರಕಟಣೆ ದಿ:20-6-2022.
2)ಇದೇ ಸಮಸಂಖ್ಯೆ ಟೆಂಡರ್ ಆದೇಶ ದಿ:13-9-2022.
3)ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ರವರ ಪತ್ರ ಸಂ/ಕವಶಿಸಸ/ಮೂಭೂ2/ಸಿಆರ್81/21-22(ಹಾಸನ) ದಿ:30-11-2022.
4)ಶ್ರೀ ಮಲ್ಲಿಕಾರ್ಜುನ.ಎಸ್.ಹಿರಿಯ ಶ್ರೇಣಿ ಉಪನ್ಯಾಸಕರು, ಎಸ್.ಜೆ.ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು ರವರ 3ನೇ ವ್ಯಕ್ತಿ ತಪಾಸಣೆ ವರದಿ ದಿ:9-12-2022.
5)ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೊರೇಷನ್ ರವರಿಗೆ ನೀಡಿದ ಇದೇ ಸಮಸಂಖ್ಯೆ ನೋಟೀಸ್ ದಿ:9-12-2022
6)ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ಪತ್ರ ಸಂ/ಸಕಇ/348/ಎಂಡಿಎಸ್ 2022 ದಿ:16-12-2022.
7)ಇದೇ ಸಮಸಂಖ್ಯೆ ಆದೇಶ ದಿ:26-12-2022.
8)ಅಪರ ಜಿಲ್ಲಾಧಿಕಾರಿಗಳು, ಹಾಸನ ಹಾಗೂ ಅಧ್ಯಕ್ಷರು, ಡಿಬಾರ್‌ಮೆಂಟ್ ಸಮಿತಿ ರವರ ವರದಿ ದಿ:13-6-2023.

*-*-*-*-*-*-*

**ಪ್ರಸ್ತಾವನೆ:**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಸತಿ ಶಾಲೆಗಳಿಗೆ 17 ವಿವಿಧ ಬಗೆಯ ಮೂಲಭೂತ ಸಾಮಗ್ರಿಗಳನ್ನು ಜಿಲ್ಲಾ ಮಟ್ಟದಲ್ಲಿ ಟೆಂಡರ್ ಆಹ್ವಾನಿಸಿ, ಖರೀದಿಸಿ ವಸತಿ ಶಾಲೆ/ಕಾಲೇಜುಗಳಿಗೆ ಒದಗಿಸಲು ದಿ:12-5-2022ರ ಸರ್ಕಾರಿ ಆದೇಶದಲ್ಲಿ ಮತ್ತು ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ರವರ ದಿ:16-5-2022ರಲ್ಲಿ ಆದೇಶಿಸಿದ್ದಂತೆ ಹಾಸನ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು, ಎಂ.ಡಿ.ಹೊಸೂರು, ದುದ್ದ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬ್ಯಾಕರವಳ್ಳಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, ಗುಡ್ಡೇನಹಳ್ಳಿ, ವಸತಿ ಶಾಲೆಗಳಿಗೆ ಹಾಸಿಗೆ, ದಿಂಬು ಸರಬರಾಜಿಗಾಗಿ ಉಲ್ಲೇಖ (1)ರಂತೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಕರೆದು ಉಲ್ಲೇಖ (2)ರಂತೆ ಮೇಲ್ಕಂಡ 3 ಶಾಲೆಗಳಿಗೆ ಹಾಸಿಗೆ, ದಿಂಬು, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್ ಸರಬರಾಜು ಮಾಡಲು ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೊರೇಷನ್, ಬೆಂಗಳೂರು ರವರಿಗೆ ರೂ.36,16,200/- ಗಳ ಮೌಲ್ಯದ ಸರಬರಾಜು ಆದೇಶ ನೀಡಲಾಗಿರುತ್ತದೆ.

ಟೆಂಡರ್ ಸರಬರಾಜು ಆದೇಶ ಪಡೆದು ಕರಾರು ಒಪ್ಪಂದ ಮಾಡಿಕೊಂಡ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೊರೇಷನ್, ಬೆಂಗಳೂರು ರವರು ದಿ:2-11-2022 ರಂದು 3 ವಸತಿ ಶಾಲೆಗಳಿಗೆ ಹಾಸಿಗೆ, ದಿಂಬು, ಬೆಡ್‌ಶೀಟ್ & ಬೆಡ್‌ಸ್ಪ್ರೆಡ್ ಗಳನ್ನು ಸರಬರಾಜು ಮಾಡಿರುತ್ತಾರೆ. ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ರವರ ದಿ:16-5-2022ರ ಆದೇಶದಲ್ಲಿ ಸರಬರಾಜಾದ ಸಾಮಗ್ರಿಗಳ ಬಿಲ್‌ಗಳು ಕೇಂದ್ರ ಕಛೇರಿಗೆ ಸಲ್ಲಿಕೆಯಾದ ನಂತರ ನಿಗದಿತ ಸ್ಪೆಸಿಫಿಕೇಷನ್ ಹೊಂದಿರುವುದನ್ನು ಖಚಿತಪಡಿಸಿಕೊಳ್ಳಲು 3ನೇ ವ್ಯಕ್ತಿ ತಪಾಸಣೆ ಕೈಗೊಂಡು ತೃಪ್ತಿಕರ ವರದಿ ಪಡೆದ ನಂತರ ಬಿಲ್‌ಗಳ ಪಾವತಿಗೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿರುವಂತೆ ಸಂಬಂಧಪಟ್ಟ 3 ವಸತಿ ಶಾಲೆಗಳ ಪ್ರಾಂಶುಪಾಲರುಗಳು ದೃಢೀಕರಿಸಿ ಸಲ್ಲಿಸಿದ ಸರಬರಾಜು ಬಿಲ್‌ಗಳನ್ನು ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರು ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ, ಬೆಂಗಳೂರು ರವರಿಗೆ ದಿ:14-11-2022ರ ಪತ್ರದಲ್ಲಿ ಸಲ್ಲಿಸಿರುತ್ತಾರೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಿಗೆ ಟೆಂಡರ್‌ನಲ್ಲಿ ನಿಗದಿಪಡಿಸಿರುವ rubberised coir quilted mattresses 90 density, 30 DRC ರ ವಿನ್ಯಾಸ, ಗುಣಮಟ್ಟ, ನಿರ್ದಿಷ್ಟತೆಗಳಂತೆ ಹಾಸಿಗೆ, ದಿಂಬುಗಳನ್ನು ಸರಬರಾಜು ಮಾಡದೆ ಕಡಿಮೆ ಮೊತ್ತದಲ್ಲಿ ಸಿಗುವ ಇಪಿಎಫ್ ಸಾಮಗ್ರಿ ಉಪಯೋಗಿಸಿ ಹಾಸಿಗೆಗಳನ್ನು ತಯಾರಿಸಿ, ಸರಬರಾಜು ಮಾಡುತ್ತಿರುವುದಾಗಿ ಕರ್ನಾಟಕ ಸ್ಟೇಟ್ ಕಾಯರ್ ಇಂಡಸ್ಟ್ರೀಸ್ ಅಸೋಸಿಯೇಷನ್ ರವರು ಸರ್ಕಾರಕ್ಕೆ ದೂರು ನೀಡಿರುವುದರಿಂದ ವಸತಿ ಶಾಲೆಗಳಿಗೆ ಸರಬರಾಜಾಗಿರುವ ಹಾಸಿಗೆ, ದಿಂಬುಗಳ ಗುಣಮಟ್ಟವನ್ನು ಪರೀಕ್ಷಿಸಿ ವರದಿ ಸಲ್ಲಿಸಲು ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ರವರು ಉಲ್ಲೇಖ (3)ರ ದಿ:30-11-2022ರ ಪತ್ರದಲ್ಲಿ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ ರವರಿಗೆ

ಸೂಚಿಸಿರುತ್ತಾರೆ. ಹಾಸನ ಜಿಲ್ಲೆಯ 3 ವಸತಿ ಶಾಲೆಗಳಿಗೆ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್, ಬೆಂಗಳೂರು ರವರು ಸರಬರಾಜು ಮಾಡಿದ್ದ ಹಾಸಿಗೆ, ದಿಂಬುಗಳ ಗುಣಮಟ್ಟ ಪರೀಕ್ಷಿಸಿ 3ನೇ ವ್ಯಕ್ತಿ ತಪಾಸಣೆ ವರದಿ ನೀಡಲು ದಿ:3-12-2022 ಮತ್ತು ದಿ:6-12-2022ರ ಪತ್ರಗಳಲ್ಲಿ ಪ್ರಾಂಶುಪಾಲರು, ಎಸ್.ಜೆ.ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು ರವರನ್ನು ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ ರವರು ಕೋರಿರುತ್ತಾರೆ. ಎಸ್.ಜೆ.ಸರ್ಕಾರಿ ಪಾಲಿಟೆಕ್ನಿಕ್‌ನ ಶ್ರೀ ಮಲ್ಲಿಕಾರ್ಜುನ್, ಹಿರಿಯ ಉಪನ್ಯಾಸಕರು ದಿ:8-12-2022 ರಂದು ತಪಾಸಣೆಗೆ ಬರುವುದಾಗಿ ತಿಳಿಸಿದಂತೆ, 3ನೇ ವ್ಯಕ್ತಿ ತಪಾಸಣೆ ಸಂದರ್ಭದಲ್ಲಿ ಹಾಜರಿರುವಂತೆ ಸಾಮಗ್ರಿಗಳ ಸರಬರಾಜುದಾರರಿಗೆ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ ರವರ ದಿ:7-12-2022ರ ಪತ್ರದಲ್ಲಿ ಸೂಚನೆ ನೀಡಲಾಗಿರುತ್ತದೆ.

ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್, ಬೆಂಗಳೂರು ರವರು 3 ವಸತಿ ಶಾಲೆಗಳಿಗೆ ಸರಬರಾಜು ಮಾಡಿದ್ದ ಹಾಸಿಗೆ, ದಿಂಬು, ಬೆಡ್ ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳನ್ನು ಎಸ್.ಜೆ.ಸರ್ಕಾರಿ ಪಾಲಿಟೆಕ್ನಿಕ್‌ನ ಹಿರಿಯ ಶ್ರೇಣಿ ಉಪನ್ಯಾಸಕರು ದಿ:8-12-2022 ರಂದು 3ನೇ ವ್ಯಕ್ತಿ ತಪಾಸಣೆ ಮಾಡಿ ದಿ:9-12-2022ರ ತಪಾಸಣಾ ವರದಿಯಲ್ಲಿ 3 ವಸತಿ ಶಾಲೆಗಳಿಗೆ ಸರಬರಾಜಾಗಿರುವ ಹಾಸಿಗೆ ಮತ್ತು ದಿಂಬುಗಳು ಟೆಂಡರ್ ಸ್ಪೆಸಿಫಿಕೇಷನ್‌ಗೆ ಅನುಗುಣವಾಗಿ ಇರುವುದಿಲ್ಲ ಹಾಗೂ ಬೆಡ್ ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳು ಟೆಂಡರ್ ಸ್ಪೆಸಿಫಿಕೇಷನ್‌ಗೆ ಅನುಗುಣವಾಗಿ ಇರುವುದಾಗಿ ಮತ್ತು ಹಾಸಿಗೆಗಳಲ್ಲಿ 4" thickness of rubberised coir ಬದಲಿಗೆ 4" thickness of EPF (Expanded Polyethylene foam most widely used in plastic production) ಬಳಸಿರುವುದು ಕಂಡುಬಂದಿರುತ್ತದೆ ಮತ್ತು ದಿಂಬುಗಳಿಗೆ ಸಂಬಂಧಿಸಿದಂತೆ Whole Pillow is filled with Waste Pieces, Rubber content instead of Polyurethane Fibre ಎಂದು ತಿಳಿಸಿರುತ್ತಾರೆ.

3 ವಸತಿ ಶಾಲೆಗಳಿಗೆ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್, ಬೆಂಗಳೂರು ರವರು ಸರಬರಾಜು ಮಾಡಿರುವ ಹಾಸಿಗೆ ಮತ್ತು ದಿಂಬುಗಳು ಟೆಂಡರ್ ಸ್ಪೆಸಿಫಿಕೇಷನ್‌ಗೆ ಅನುಗುಣವಾಗಿರುವುದಿಲ್ಲವೆಂದು 3ನೇ ವ್ಯಕ್ತಿ ತಪಾಸಣಾ ವರದಿಯಿಂದ ತಿಳಿದು ಬಂದಂತೆ, ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್, ಬೆಂಗಳೂರು ರವರಿಗೆ ಉಲ್ಲೇಖ (5)ರಲ್ಲಿ ಟೆಂಡರ್‌ನ ಆದೇಶ, ಷರತ್ತುಗಳಂತೆ ಹಾಗೂ ಕರಾರು ಪತ್ರದಲ್ಲಿ ಒಪ್ಪಂದ ಮಾಡಿಕೊಂಡಂತೆ ಟೆಂಡರ್‌ನ ಸ್ಪೆಸಿಫಿಕೇಷನ್‌ಗೆ ಅನುಗುಣವಾದ ಹಾಸಿಗೆ, ದಿಂಬುಗಳನ್ನು ಸರಬರಾಜು ಮಾಡದಿರುವುದರಿಂದ ಸಂಸ್ಥೆಗೆ ನೀಡಿರುವ ಟೆಂಡರ್‌ನ್ನು ರದ್ದುಪಡಿಸಿ ಸಂಸ್ಥೆಯನ್ನು ಏಕೆ ಕಪ್ಪು ಪಟ್ಟಿಗೆ ಸೇರಿಸಬಾರದು ಹಾಗೂ ಸಂಸ್ಥೆಯಿಂದ ನೀಡಿರುವ ಬ್ಯಾಂಕ್ ಗ್ಯಾರಂಟಿ ಮೊತ್ತವನ್ನು ಏಕೆ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ವಹಿಸಬಾರದು ಎಂದು 3 ದಿನಗಳೊಳಗೆ ಲಿಖಿತ ಸಮಜಾಯಿಷಿ ಸಲ್ಲಿಸಲು ಹಾಗೂ 3 ದಿನಗಳೊಳಗೆ ಸಮಜಾಯಿಷಿ ಸಲ್ಲಿಸದಿದ್ದಲ್ಲಿ ಸಂಸ್ಥೆ ವಿರುದ್ಧ ಏಕಪಕ್ಷೀಯವಾಗಿ ನಿಯಮಾನುಸಾರ ಕ್ರಮ ವಹಿಸಲಾಗುವುದೆಂದು ಸೂಚಿಸಿ ನೋಟೀಸ್ ನೀಡಲಾಗಿರುತ್ತದೆ. ಸದರಿ ನೋಟೀಸ್‌ಗೆ ಟೆಂಡರ್‌ದಾರರು ದಿ:13-12-2022ರ ಪತ್ರದಲ್ಲಿ ಕಣ್ತಪ್ಪಿನಿಂದಾಗಿ ಶಾಲೆಗಳಿಗೆ ಸರಬರಾಜಾಗಿರುವ ಹಾಸಿಗೆ ಮತ್ತು ದಿಂಬುಗಳು ಬದಲಾವಣೆಯಾಗಿರುವುದಾಗಿ ಸಮಜಾಯಿಷಿ ಸಲ್ಲಿಸಿರುತ್ತಾರೆ. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರು ಉಲ್ಲೇಖ (6)ರ ಪತ್ರದಲ್ಲಿ ಟೆಂಡರ್‌ನಲ್ಲಿ ನಿಗದಿಪಡಿಸಲಾದ ಸ್ಪೆಸಿಫಿಕೇಷನ್ ಅನ್ವಯ ರಬ್ಬರೈಸ್ಡ್ ಹಾಸಿಗೆ ಮತ್ತು ದಿಂಬುಗಳನ್ನು ಸರಬರಾಜು ಮಾಡದ ಸರಬರಾಜುದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಕ್ರಮ ವಹಿಸಲು ಸೂಚಿಸಿರುತ್ತಾರೆ.

ಟೆಂಡರ್ ಸ್ಪೆಸಿಫಿಕೇಷನ್‌ಗೆ ಅನುಗುಣವಾದ ಹಾಸಿಗೆ, ದಿಂಬು ಸರಬರಾಜು ಮಾಡಲು ಟೆಂಡರ್ ನಿಯಮ ಉಲ್ಲಂಘನೆ ಮಾಡಿರುವ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್, ಬೆಂಗಳೂರು ರವರ ವಿರುದ್ಧ ಕ್ರಮ ಜರುಗಿಸಲು ಉಲ್ಲೇಖ (7) ರಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಡಿಬಾರ್‌ಮೆಂಟ್ ಸಮಿತಿಯನ್ನು ರಚಿಸಿ, ವರದಿ ಸಲ್ಲಿಸಲು ಆದೇಶಿಸಲಾಗಿರುತ್ತದೆ. ಅಪರ ಜಿಲ್ಲಾಧಿಕಾರಿ ಹಾಗೂ ಡಿಬಾರ್‌ಮೆಂಟ್ ಸಮಿತಿ ಅಧ್ಯಕ್ಷರು ಉಲ್ಲೇಖ (8) ರಲ್ಲಿ ಡಿಬಾರ್‌ಮೆಂಟ್ ಸಮಿತಿಯ ವರದಿಯನ್ನು ನೀಡಿರುತ್ತಾರೆ.

ಡಿಬಾರ್‌ಮೆಂಟ್ ಸಮಿತಿ ಸಭೆಗೆ ದಿ:5-1-2023 ಮತ್ತು 16-1-2023 ರಂದು ಅನಾರೋಗ್ಯದ ಕಾರಣ ಸಭೆಗೆ ಹಾಜರಾಗಲು ಸಾಧ್ಯವಾಗುವುದಿಲ್ಲವೆಂದ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್ ರವರು ಮನವಿ ಪತ್ರ ನೀಡಿದ ಕಾರಣ ಸಭೆಯನ್ನು 2 ಬಾರಿ ಮುಂದೂಡಲಾಗಿರುತ್ತದೆ. ದಿ:27-1-2023, 28-2-2023 ಮತ್ತು 7-3-2023 ಗಳಂದು ನಡೆದ ಡಿಬಾರ್‌ಮೆಂಟ್ ಸಮಿತಿ ಸಭೆಗಳಿಗೆ ಹಾಜರಾಗಿದ್ದ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್ ರವರು ನೀಡಿರುವ ಲಿಖಿತ ಸಮಜಾಯಿಷಿಗಳನ್ನು ವಿಶ್ಲೇಷಿಸಿದಾಗ ಟೆಂಡರ್‌ದಾರರು ಹಾಸಿಗೆ, ದಿಂಬು, ಬೆಡ್‌ಶೀಟ್, ಬೆಡ್ ಸ್ಪ್ರೆಡ್ ಸರಬರಾಜು ಮಾಡಲು ಇಲಾಖೆಯಿಂದ ಆದೇಶ ಪಡೆದು ಹಾಸಿಗೆ ಸರಬರಾಜು ಮಾಡಲು, ಹಾಸಿಗೆ ಉತ್ಪಾದನಾ ಘಟಕದ ಸಂಸ್ಥೆಯವರಿಗೆ ಆರ್ಡರ್ ನೀಡಿರುವುದಾಗಿ ಹಾಗೂ ಆರ್ಡರ್ ಪಡೆದಿದ್ದ ಸಂಸ್ಥೆಯವರು ಕಣ್ತಪ್ಪಿನಿಂದಾಗಿ ವಸತಿ ಶಾಲೆಗೆ ಸರಬರಾಜಾಗಬೇಕಾಗಿದ್ದ ಹಾಸಿಗೆಗಳನ್ನು ಸಮುದಾಯ ಭವನಕ್ಕೆ ಹಾಗೂ ಸಮುದಾಯ ಭವನಕ್ಕೆ ಸರಬರಾಜಾಗಬೇಕಾಗಿದ್ದ ಹಾಸಿಗೆಗಳನ್ನು ವಸತಿ ಶಾಲೆಗೆ ನೀಡಿ ಅದಲು-ಬದಲು ಮಾಡಿರುತ್ತಾರೆ. ಈ ವಿಷಯ ತಿಳಿದುಕೊಂಡ ಮತ್ತೊಂದು ಸಂಸ್ಥೆಯವರು ದ್ವೇಷಕ್ಕಾಗಿ ದೂರು ಸಲ್ಲಿಸಿರುತ್ತಾರೆ. ಹಾಗೂ ಸಾಮಗ್ರಿಗಳನ್ನು ಬದಲಾವಣೆ ಮಾಡಿಕೊಡಲು ದಿ:7-12-2022 ಮತ್ತು ದಿ:13-12-2022ರ ಪತ್ರಗಳಲ್ಲಿ ಮನವಿ ಸಲ್ಲಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ ಮತ್ತು ಡಿಬಾರ್‌ಮೆಂಟ್ ಸಮಿತಿ ಸಭೆಗೆ ನೀಡಿರುವ ಸಮಜಾಯಿಷಿಗಳಲ್ಲೂ ಮನವಿ ಮಾಡಿರುವುದು ಕಂಡು ಬಂದಿರುತ್ತದೆ.


Generated from eOffice by VEENA H S, KREIS-ADM-CO(VN), COMPUTER OPERATOR, KARNATAKA RESIDENTAL EDUCATIONAL INSTITUTIONS SOCIETY on 26/06/2023 04:10

ವಸತಿ ಶಾಲೆಗಳಿಗೆ ಹಾಸಿಗೆ, ದಿಂಬು ಸರಬರಾಜು ಮಾಡಲು ಟೆಂಡರ್ ಪಡೆದ ನಂತರ ಟೆಂಡರ್ ಸ್ಪೆಸಿಫಿಕೇಷನ್‌ಗೆ ಅನುಗುಣವಾದ ಸಾಮಗ್ರಿಗಳನ್ನು ಸರಬರಾಜು ಮಾಡುವುದು ಒಬ್ಬ ಜವಾಬ್ದಾರಿಯುತ ಟೆಂಡರ್‌ದಾರರ ಕರ್ತವ್ಯವಾಗಿರುತ್ತದೆ. ಆದರೆ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್, ಬೆಂಗಳೂರು ರವರು ಸ್ಪೆಸಿಫಿಕೇಷನ್‌ಗೆ ಅನುಗುಣವಾದ ಹಾಸಿಗೆ ಮತ್ತು ದಿಂಬುಗಳನ್ನು ಸರಬರಾಜು ಮಾಡದೆ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್ ರವರ ಸಂಸ್ಥೆಯಿಂದ ಆರ್ಡರ್ ಪಡೆದಿದ್ದ ಮತ್ತೊಂದು ಸಂಸ್ಥೆಯವರಿಂದ ಸಾಮಗ್ರಿಗಳು ಅದಲು ಬದಲಾಗಿರುತ್ತವೆ ಎಂದು ತಿಳಿಸಿರುವುದು ಇಲಾಖೆಗೆ ಸಂಬಂಧಪಟ್ಟ ವಿಷಯವಾಗಿರುವುದಿಲ್ಲ. ವಸತಿ ಶಾಲೆಗಳಿಗೆ ದಿ:2-11-2022 ರಂದು ಹಾಸಿಗೆ, ದಿಂಬು, ಬೆಡ್‌ಶೀಟ್, ಬೆಡ್‌ಸ್ಪ್ರೆಡ್‌ಗಳನ್ನು ಸರಬರಾಜು ಮಾಡಿದ್ದರೂ, ಸರಬರಾಜು ಮಾಡಿರುವ ಹಾಸಿಗೆಗಳನ್ನು ಟೆಂಡರ್ ಸ್ಪೆಸಿಫಿಕೇಷನ್‌ನಲ್ಲಿ ತಿಳಿಸಿರುವಂತೆ, Rubberized Coir bare block ಬಳಸಿ ತಯಾರಿಸದೆ ಮಕ್ಕಳ ಆರೋಗ್ಯಕ್ಕೆ ಹಾನಿ ಉಂಟು ಮಾಡುವ ಕಳಪೆ ಗುಣಮಟ್ಟದ EPF (Expanded Polyethylene Foam) ಬಳಸಿ ತಯಾರಿಸಲಾಗಿರುವ ಹಾಸಿಗೆಗಳನ್ನು ಮತ್ತು ಕಳಪೆ ಗುಣಮಟ್ಟದ ದಿಂಬುಗಳನ್ನು ಸರಬರಾಜು ಮಾಡಲಾಗಿದೆ ಎಂದು ಸರ್ಕಾರಕ್ಕೆ ದಿ:23-11-2022 ರಂದು ದೂರು ಸಲ್ಲಿಕೆಯಾದ ನಂತರ ಸರಬರಾಜು ಮಾಡಲಾಗಿರುವ ಸಾಮಗ್ರಿಗಳು ಅದಲು ಬದಲಾಗಿದ್ದು, ಬದಲಾವಣೆ ಮಾಡಿಕೊಡುವುದಾಗಿ ದಿ:7-12-2022 ಮತ್ತು ದಿ:13-12-2022ರ ಪತ್ರಗಳಲ್ಲಿ ತಿಳಿಸಲಾಗಿರುತ್ತದೆ. ಸರಬರಾಜು ಮಾಡಿರುವ ಹಾಸಿಗೆ, ದಿಂಬುಗಳು ಕಳಪೆ ಗುಣಮಟ್ಟದ್ದೆಂದು ದೂರು ಬಂದ ನಂತರ ಸಾಮಗ್ರಿಗಳ ಬದಲಾವಣೆಗೆ ಮನವಿ ನೀಡಿರುವುದು ಹಾಗೂ ಸಮಜಾಯಿಷಿಯಲ್ಲಿ ತಿಳಿಸಿರುವುದು ಆಕ್ಷೇಪಾರ್ಹವಾಗಿರುವುದು ಕಂಡು ಬರುತ್ತದೆ.

ಮೇಲ್ಕಂಡ ಅಂಶಗಳನ್ವಯ ಸಾಮಗ್ರಿಗಳ ಸರಬರಾಜು ಟೆಂಡರ್ ಆದೇಶ ಪಡೆದಿದ್ದ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್ ರವರು ಟೆಂಡರ್ ಆದೇಶದ ರೀತ್ಯ ವಸತಿ ಶಾಲೆಗಳಿಗೆ ಟೆಂಡರ್‌ನಲ್ಲಿ ನಿಗದಿಪಡಿಸಿರುವ ಸ್ಪೆಸಿಫಿಕೇಷನ್‌ಗೆ ಅನುಗುಣವಾಗಿರುವ ಮತ್ತು ತಾಂತ್ರಿಕ ಪರಿಣಿತರಿಂದ ಅನುಮೋದನೆಯಾಗಿದ್ದ ಮಾದರಿಗನುಗುಣವಾದ ಹಾಸಿಗೆ, ದಿಂಬುಗಳಂತೆ ಸರಬರಾಜು ಮಾಡದೆ ಕಳಪೆ ಗುಣಮಟ್ಟದ ಹಾಸಿಗೆ, ದಿಂಬುಗಳನ್ನು ಸರಬರಾಜು ಮಾಡಿ ಟೆಂಡರ್ ಷರತ್ತು ಉಲ್ಲಂಘಿಸಿರುವ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್ ರವರ ಸಂಸ್ಥೆಯನ್ನು ಹಾಸನ ಜಿಲ್ಲಾ ವ್ಯಾಪ್ತಿಯ ಯಾವುದೇ ಇಲಾಖೆಗಳಲ್ಲಿ ಕರೆಯುವ ಟೆಂಡರ್‌ಗಳಲ್ಲಿ ಒಂದು ವರ್ಷದ ಅವಧಿಗೆ ಭಾಗವಹಿಸದಂತೆ ಡಿಬಾರ್ ಮಾಡಲು ಕೆಳಕಂಡಂತೆ ಆದೇಶ.

ಸಂ:ಉನಿಸಕಇಹಾ/ಡಿ3/ವ.ಶಾ/ಸಿಆರ್6/22-23

ದಿ:14-6-2023.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಾಸನ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಎಂ.ಡಿ.ಹೊಸೂರು, ದುದ್ದ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬ್ಯಾಕರವಳ್ಳಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, ಗುಡ್ಡೇನಹಳ್ಳಿ ವಸತಿ ಶಾಲೆಗಳಿಗೆ ದಿ:20-6-2022ರ ಟೆಂಡರ್ ಪ್ರಕಟಣೆಯಲ್ಲಿ ನಿಗದಿಪಡಿಸಿದ ಸ್ಪೆಸಿಫಿಕೇಷನ್‌ಗೆ ಅನುಗುಣವಾದ ಮತ್ತು ತಾಂತ್ರಿಕ ಪರಿಣಿತರಿಂದ ಅನುಮೋದನೆಯಾಗಿದ್ದ ಮಾದರಿಗನುಗುಣವಾದ ಹಾಸಿಗೆ, ದಿಂಬುಗಳನ್ನು ಸರಬರಾಜು ಮಾಡದೇ ಕಳಪೆ ಗುಣಮಟ್ಟದ ಹಾಸಿಗೆ, ದಿಂಬುಗಳನ್ನು ಸರಬರಾಜು ಮಾಡಿ ಟೆಂಡರ್ ಪ್ರಕಟಣೆ/ಆದೇಶದ ಷರತ್ತು ಉಲ್ಲಂಘಿಸಿರುವ ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್, ಬೆಂಗಳೂರು ರವರನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ, ಪಾರದರ್ಶಕ ಕಾಯ್ದೆ 1999ರ (Karnataka Act 29 of 2000) ನಿಯಮ 26 ಎ (6)ರಂತೆ ಹಾಸನ ಜಿಲ್ಲಾ ವ್ಯಾಪ್ತಿಯ ಯಾವುದೇ ಇಲಾಖೆಗಳಲ್ಲಿ ಕರೆಯುವ ಟೆಂಡರ್‌ಗಳಲ್ಲಿ ಈ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಟೆಂಡರ್‌ಗಳಲ್ಲಿ ಭಾಗವಹಿಸದಂತೆ ಡಿಬಾರ್ ಮಾಡಿ ಆದೇಶಿಸಿದೆ.

15/6

ಜಿಲ್ಲಾಧಿಕಾರಿಗಳು,
ಹಾಸನ ಜಿಲ್ಲೆ, ಹಾಸನ.

ಪ್ರತಿಯನ್ನು:

1. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ ಇವರಿಗೆ ಸೂಕ್ತ ಕ್ರಮಕ್ಕಾಗಿ.
4. ಪ್ರೋಪ್ರೈಟರ್, ಮೆ:ಬೀರೇಂದ್ರ ಟ್ರೇಡಿಂಗ್ ಕಾರ್ಪೋರೇಷನ್, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಕಛೇರಿ ಪ್ರತಿ.